ಅವರೊಂದು ಅರ್ಜಿ ಕೊಡುತ್ತಾರೆ, ನಿಮ್ಮ ಅಧಿಕಾರವನ್ನು ಉಪಯೋಗಿಸಿ ಆ ವ್ಯಾಪ್ತಿಯಲ್ಲಿರುವವರಿಗೆ ಮಂಜೂರಾತಿ ಮಾಡಿ ಎಂದರೆ ನಾಳೆ ಐದು ಅಥವಾ ಹತ್ತು ವರ್ಷದೊಳಗಾಗಿ ಬೆಂಗಳೂರಿನಲ್ಲಿ ಒಂದು ಇಂಚು ಭೂಮಿ ಕೂಡ ಉಳಿಯುವುದಕ್ಕೆ ಸಾಧ್ಯವಾಗುವುದಿಲ್ಲ. ಅವೆಲ್ಲವೂ ಕೂಡ ನಮ್ಮ ಕನ್ನಡಿಗರನ್ನು, ಬಡವರನ್ನು, ಅಮಾಯಕರನ್ನು ಉಪಯೋಗಿಸಿಕೊಂಡು ದೊಡ್ಡವರು ಹಿಂದೆ ಇದ್ದಾರೆ. ಈ ದೊಡ್ಡವರ ಹಿಂದೆ ಇರುವ ಮುಖವಾಡವನ್ನು ತೆಗೆಯುವುದಕ್ಕೆ ಸಾಧ್ಯವಾಗುತ್ತಿಲ್ಲ, ಇದೊಂದು ಬಹಳ ವಿಷವರ್ತುಲದ ಪರಿಸ್ಥಿತಿ ಇದೆ, ತಾವು ಹೇಳಿದ ರೀತಿಯಲ್ಲಿ ಅದಕ್ಕೆ ಸಂಪೂರ್ಣವಾಗಿ ನಾವು ಬದ್ಧರಾಗಿರುತ್ತೇವೆ, ತಾವು ಹೇಳಿದ್ದನ್ನು ಇವತ್ತೇ ನಮ್ಮ ಅಧಿಕಾರಿಗಳ ಮುಖಾಂತರ ಕಡತವನ್ನು ತರಿಸಿಕೊಂಡು, ಯಾವ ಕಾಲಕ್ಕೂ ಅರಣ್ಯ ಬೆಳೆಸಿರುವುದನ್ನು ಬದಲಿ ಮಾಡುವುದಕ್ಕಾಗುವುದಿಲ್ಲ. ಇಲ್ಲಿರುವ ಮಾನ್ಯ ಸದಸ್ಯರುಗಳಾದ ಶ್ರೀ ಸೋಮಣ್ಣ ಹಾಗೂ ಇಲ್ಲಿರುವ ಶಾಸಕ ಮಿತ್ರರಿಗೆ ಗೊತ್ತಿರುವಂತೆ ಒಂದೊಂದು ಸಲ. ಎರಡೆರಡು ಸಲ ಗ್ರೀನ್ ಬೆಲ್ಟ್ ಅನ್ನು ಮುಂದಕ್ಕೆ ಸರಿಸುತ್ತಲೇ ಇದ್ದೇವೆ, ಹಾಗೆ ಇರುವುದಾದರೆ, ಬೆಂಗಳೂರಿಗೆ ಇದಕ್ಕಿಂತ ಇನ್ನು ಹೆಚ್ಚು ಬೆಂಗಳೂರು ಬೆಳೆದರೆ ಯಾವತ್ತಾದರೂ ಒಂದು ದಿವಸ ಕುಸಿದು ಬೀಳುತ್ತದೆ. ಅದಕ್ಕೆ ಅವಕಾಶ ಕಲ್ಪಿಸಲಾರದಂತೆ ಸರ್ಕಾರ ಯೋಚನೆಯನ್ನು ಮಾಡುತ್ತದೆ, ಶಾಸಕರು ಇದಕ್ಕೆ ಸಹಕಾರ ಕೊಡಬೇಕೆಂದು ಮನವಿ ಮಾಡುತ್ತೇನೆ,

ಹುಲಸೂರು ಮೀಸಲು ಕ್ಷೇತ್ರದಲ್ಲಿ ಕೈಗೊಂಡ ಯೋಜನೆಗಳು

71(620) ಶ್ರೀ ರಾಜೇಂದ್ರ ವರ್ಮ (ಹುಲಸೂರು) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕರ್ನಾಟಕ ಗಡಿ ಭಾಗದಲ್ಲಿರುವ ಹುಲಸೂರು ಮೀಸಲು ಕ್ಷೇತ್ರದ ಅಭಿವೃದ್ಧಿಗಾಗಿ ಕಳೆದ ಮೂರು ವರ್ಷಗಳಿಂದ ಯಾವ ಯಾವ ಯೋಜನೆಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ;

ಆ) ಹಣ ಸಾಲದೆ ಅಪೂರ್ಣಗೊಂಡಿರುವ ಯೋಜನೆಗಳನ್ನು ಪೂರ್ಣಗೊಳಿಸಲು ಹಣ ಬಿಡುಗಡೆ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು;

ಇ) 2004-05ನೇ ಸಾಲಿನ ಆಯವ್ಯಯದಲ್ಲಿ ಯಾವ ಯಾವ ಹೊಸ ಯೋಜನೆಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗುವುದು ;

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯ ಮಂತ್ರಿಗಳು)

ಅ) ಹುಲಸೂರು ಕ್ಷೇತ್ರಕ್ಕೆ ಯೋಜನಾ ಇಲಾಖೆಯ ವತಿಯಿಂದ ಬಿಡುಗಡೆ ಮಾಡಿದ ಹಣದ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಗಡೀ ಪ್ರದೇಶಾಭಿವೃದ್ಧಿ ಯೋಜನೆಯಲ್ಲಿ ಹಾಗೂ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಅಪೂರ್ಣಗೊಂಡ ಯಾವ ಕಾಮಗಾರಿಗಳು ಇರುವುದಿಲ್ಲ. ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಇರುವ ಅಪೂರ್ಣಗೊಂಡ ಕಾಮಗಾರಿಗಳಿಗೆ, ಸಂಪನ್ಮೂಲಗಳನ್ನಾಧರಿಸಿ ಹಣ ಬಿಡುಗಡೆ ಮಾಡಲಾಗುವುದು.

ಇ) ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಲಿಯಲ್ಲಿ ಈ ಹುಲಸೂರು ಕ್ಷೇತ್ರದಲ್ಲಿ ತೆಗೆದುಕೊಳ್ಳುವ ಹೊಸ ಯೋಜನೆಗಳು, ಮಂಡಳಿಯ ಕ್ರಿಯಾ ಯೋಜನೆಯ ಸರ್ಕಾರಕ್ಕೆ ಸಲ್ಲಿಸಿದ ನಂತರ ತಿಳಿಸಲಾಗುವುದು.

DETAILS OF AMOUNT RELEASED TO HULSUR CONSTITUENCY

PROGRAMME	AMOUNT RELEASED (IN LAKHS)		
	2001-02	2002-03	2003-04
Hyderbad Karnataka Area Development Board	75.13	99.48	48.17
Bordere Area Development Programme	50.40	51.00	0.63
Legislators Local Area Development Programme	25.00	10.00	
Total	**150.53**	**160.48**	**48.80**

ಶ್ರೀ ರಾಜೇಂದ್ರ ವರ್ಮ : ನಾನು ಕೇಳಿರುವ ಪ್ರಶ್ನೆಗಳು ಮೂರು, ಅದರಲ್ಲಿ ನನ್ನ ಎರಡನೆಯ ಪ್ರಶ್ನೆಗೆ ಉತ್ತರವಾಗಿ, ಅಪೂರ್ಣವಾಗಿರುವ ಕೆಲಸಗಳು ಯಾವುದೂ ಇಲ್ಲವೆಂದು ಹೇಳುತ್ತಿದ್ದಾರೆ. ಗಡಿಭಾಗದಲ್ಲಿರುವ ಎಲ್ಲಾ ಗ್ರಾಮಗಳಿಗೆ ಒಂದು ಅಂದಾಜುಪಟ್ಟಿಯನ್ನು ತಯಾರು ಮಾಡಿ ಹಿಂದಿನ ಈ ಎಸ್.ಎಂ. ಕೃಷ್ಣರವರ ಸರ್ಕಾರವಿದ್ದಾಗ ಒಟ್ಟು ಒಂದು ಕೋಟಿ ತೊಂಬತ್ತ ಏಳು ಲಕ್ಷ ರೂಪಾಯಿಗಳ ಅಂದಾಜು ಮಾಡಿ ನಾನು ಅರ್ಜಿ ಕೊಟ್ಟಾಗ ಮಾನ್ಯ ಹಿಂದಿನ ಮುಖ್ಯಮಂತ್ರಿಗಳು ಕಂತುಗಳಲ್ಲಿ ಬಿಡುಗಡೆ ಮಾಡಿ ಎಂದು ಹೇಳಿದ್ದರು. ಅವರು ಯಾವ ರೀತಿ ಹಣ ಬಿಡುಗಡೆ ಮಾಡಿದರೋ ಅದೇ ರೀತಿ ಕೆಲಸ ಪ್ರಾರಂಭವಾಯಿತು. ಕೊನೆಗೆ ಒಂದು ಕೋಟಿ, ಒಂದು ಲಕ್ಷ ಅರವತ್ತಮೂರು ಸಾವಿರ ರೂಪಾಯಿಗಳನ್ನು ಹಣಕಾಸು ಇಲಾಖೆಯವರು ಹಣವಿಲ್ಲವೆಂದು ಕೊಡಲಿಲ್ಲ ಈಗ ಮುಂದೆ ಆಗುವಂಥ ಕೆಲಸಗಳು ಅಪೂರ್ಣವಾಗಿವೆ ಇದು ಮಹಾರಾಷ್ಟ್ರ ಗಡಿಪ್ರದೇಶದಲ್ಲಿರುವುದು. ಈ ರಾಷ್ಟ್ರದ ಗೃಹಸಚಿವರು. ಮಹಾರಾಷ್ಟ್ರದಿಂದ ನನ್ನ ಹುಲಸೂರು ಕ್ಷೇತ್ರದ ಮೇಲೆ ಹೈದರಾಬಾದ್ ವಿಮಾನ ನಿಲ್ದಾಣಕ್ಕೆ ಹೋಗುವುದು. ಅವರು ಕಾರಿನಲ್ಲಿ ಬರುವ ಸಮಯದಲ್ಲಿ ಎಚ್ಚರವಾಗುತ್ತದೆ. ಕರ್ನಾಟಕ ಬಂತೇನಪ್ಪಾ ಎಂದು ಅವರು ನೆನಸುತ್ತಾರೆ. ಆದುದರಿಂದ ದಯವಿಟ್ಟು ಇಲ್ಲಿ ಬೊಳೆಗಾಂವ್, ಹುರಿವಾಡಿ ಮಾಣಿಕೇಶ್ವರ್, ನಾಡದಸಂಗಂ ಮಾಚ್ನ, ಹುಲಸೂರ್, ನಾಮದೇವ್‌ರೋಡ್ ಮತ್ತು ಮೆಹತಕ್ ಇವಕ್ಕೆ ಬಾಕಿರುವ 96 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದರೆ ಇವುಗಳ ಸಂಪೂರ್ಣ ಕೆಲಸವಾಗುತ್ತದೆ. ಮಾನ್ಯ ಉಪ ಮುಖ್ಯಮಂತ್ರಿಗಳು ಈ ಬಗ್ಗೆ, ಕಾಳಜಿವಹಿಸಬೇಕು, ಅದು ಗಡಿಭಾಗದಲ್ಲಿರುವ ಪ್ರದೇಶವಾಗಿದೆ ಅಭಿವೃದ್ಧಿಯಾಗಿಲ್ಲ ಬಹಳ ವರ್ಷದಿಂದ ಇದು ಕುಂಠಿತವಾಗಿದೆ, ಸರ್ಕಾರದ ಯೋಜನೆಗಳು ಆ ಭಾಗಕ್ಕೆ ಹೋಗಿಲ್ಲ. ಅಲ್ಲಿರುವ ಜನರು ವಂಚಿತರಾಗಿದ್ದಾರೆ

ಅದಕ್ಕಾಗಿ ದಯವಿಟ್ಟು ಹಣ ಬಿಡುಗಡೆ ಮಾಡಬೇಕು. ಕಡತಗಳು ಹಣಕಾಸು ಇಲಾಖೆಯಲ್ಲಿವೆ ತಿರುಗಾಡಿ ತಿರುಗಾಡಿ ನಾನು ಸೋತುಹೋಗಿದ್ದೇನೆ. ಅಲ್ಲಿ ಯಾರಿಗೂ ಕರುಣೆ ಬಂದಿಲ್ಲ ಯಾರೂ ಹಣ ಬಿಡುಗಡೆ ಮಾಡಿಲ್ಲ ಆದುದರಿಂದ ನಿಮ್ಮ ಮೂಲಕ ಸರ್ಕಾರದಲ್ಲಿ ಆಗ್ರಹ ಮತ್ತು ವಿನಂತಿ ಮಾಡುತ್ತೇನೆ, ಮಾನ್ಯ ಉಪ ಮುಖ್ಯಮಂತ್ರಿಗಳು ಈ ಬಗ್ಗೆ ಕಾಳಜಿ ವಹಿಸಿ ಹಣ ಬಿಡುಗಡೆ ಮಾಡಬೇಕು. ಎರಡನೆಯದಾಗಿ, ಹೈದರಾಬಾದ್ ಏರಿಯಾದಲ್ಲಿ ಮುಂದೆ ಬರತಕ್ಕ ವರ್ಷದಲ್ಲಿ ಯಾವ್ಯಾವ ಕೆಲಸಗಳನ್ನು ಕೈಗೆತ್ತಿಕೊಂಡಿದ್ದೀರಿ ಎಂದು ಕೇಳಿದಾಗ, ಹೈದರಾಬಾದ್-ಕರ್ನಾಟಕ ಪ್ರದೇಶ ಅಭಿವೃದ್ಧಿ ಯೋಜನೆಗಳನ್ನು ಸಲ್ಲಿಸಿದಾಗ ಅದರ ಹಣ ಬಿಡುಗಡೆ ಮಾಡುತ್ತೇವೆ ಪರಿಶೀಲಿಸಲಾಗುವುದು ಎಂದು ಹೇಳಿದ್ದಾರೆ. ಆದರೆ ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿಗೆ ನಾವು ಕೊಟ್ಟಂತಹ ಕ್ರಿಯಾಯೋಜನೆ ಮಂಜೂರು ಮಾಡಲು ಹಾಗಿದ ಲಭ್ಯತೆ ಇದೆಯೇ ಎಂಬುದನ್ನು ಮಾನ್ಯ ಉಪಮುಖ್ಯಮಂತ್ರಿಗಳು ದಯವಿಟ್ಟು ತಿಳಿಸಬೇಕು.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಕ್ರಿಯಾಯೋಜನೆಗಳನ್ನು ಶಾಸಕರೇ ತಯಾರು ಮಾಡುವುದು, ಅದರಲ್ಲಿ ಆ ಭಾಗದಲ್ಲಿರುವ ಎಲ್ಲಾ ಶಾಸಕರು ಇರುತ್ತಾರೆ. ಅದು ತಯಾರಾದ ಮೇಲೆ ಈ ವರ್ಷ ಎಷ್ಟು ಅನುದಾನ ಅಲೋಕೇಷನ್ ಇದೆ ಅದರ ಮೇಲೆ ಹಣ ಬಿಡುಗಡೆ ಮಾಡುತ್ತೇವೆ, ಈ ಸಾರಿ ಹೆಚ್‌ಕೆಡಿಬಿನಲ್ಲಿ 40 ಕೋಟಿ ರೂಪಾಯಿಗಳಿವೆ. ನಿಮ್ಮ ಕ್ರಿಯಾಯೋಜನೆಯಲ್ಲಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಾರೆ, ಯಾವ್ಯಾವ ಕ್ಷೇತ್ರದಲ್ಲಿ ಏನೇನು ಆಗಬೇಕೆಂದು ಇವರೇ ಹೇಳುತ್ತಾರೆ. ಆ ಪ್ರಕಾರ ಕ್ರಿಯಾಯೋಜನೆಯಾಗುತ್ತದೆ. ನಂತರ ಹಣ ಬಿಡುಗಡೆಯಾಗುತ್ತದೆ. ಹಿಂದೆ ಇವರು 96 ಲಕ್ಷ ರೂ ಕೇಳಿದ್ದು ವಿಶೇಷ ಅನುದಾನ, ಎಲ್ಲಕ್ಕೂ ಕೂಡ ಗಡಿಪ್ರದೇಶಾಭಿವೃದ್ಧಿ ಇರಬಹುದು, ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ನಿಗಮ ಇರಬಹುದು ಎಲ್ಲರಿಗೂ ಸಮಾನಾಂತರವಾಗಿ ಹಣ ಬಿಡುಗಡೆ ಮಾಡುತ್ತೇವೆ. ಇವರು ನಮ್ಮದು ಗಡಿಪ್ರದೇಶದ ವಿಶೇಷ ಅನುದಾನ ಕೊಡಬೇಕು. ಹಿಂದೆ ಕೊಟ್ಟಿದ್ದರು, ಇನ್ನೂ ಕೊಡುತ್ತೇವೆಂದು ಹೇಳಿದ್ದರು, ಅದರ ಬಾಕಿ ಕೊಡಬೇಕೆಂದು ಹೇಳುತ್ತಿದ್ದಾರೆ. ಅದು ಸರ್ಕಾರದ ಮಟ್ಟದಲ್ಲಿದರೆ, ಕಡತವನ್ನು ತರಿಸಿ ಆ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ರಾಜೇಂದ್ರವರ್ಮ : ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಫಂಡ್ ಎರಡು ವರ್ಷದಿಂದ ಇಲ್ಲಿಯವರೆಗೆ ಇಲ್ಲ, ಈಗ ನಾವು ಕ್ರಿಯಾಯೋಜನೆಯನ್ನು ಮಾಡಿಕೊಡುವುದಕ್ಕೆ ತಾವು ಅವಕಾಶ ಮಾಡಿಕೊಡಬಹುದು.

ಶ್ರೀ ಸಿದ್ಧರಾಮಯ್ಯ : ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿಗೆ 2004-05ನೇ ಸಾಲಿಗೆ, ಹಣವನ್ನು ಆಯವ್ಯಯದಲ್ಲಿ ಒದಗಿಸಿದ್ದೇವೆ, ಅಲೋಕೇಷನ್ ಆಗಿದೆ, ಕ್ರಿಯಾಯೋಜನೆಗಳನ್ನು ಮಾಡಿ ಕಾರ್ಯಕ್ರಮಗಳನ್ನು ರೂಪಿಸಿದ ಮೇಲೆ ಮಾಡುತ್ತೇವೆ. ಬಾಕಿ ಸುಮಾರು 37 ವರ್ಕ್ಸ್ ಹುಲಸೂರು ಕ್ಷೇತ್ರದಲ್ಲಿ ಉಳಿದಿದ್ದಾವೆ ಅವಕ್ಕೂ ಕೂಡ ಬೇಕಾದಂಥ ಹಣವನ್ನು ಒದಗಿಸುತ್ತೇವೆ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು